**International Journal of Academic Research**
P-ISSN: 2348-7666: Impact Factor: 6.023
Homepage: https://www.ijar.org.in/
Volume-12, Issue-3, Jul-Sep-2025
This work is licensed under a Creative Commons Attribution 4.0 International License [CC BY 4.0]

**Research Article**

# ಕನ್ನಡ ಶಿವಶರಣೆಯರ ವಚನಗಳಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ

**ಡಾ. ಜಯಶಂಕರ ಎಂ.**

ಸಹ ಪ್ರಾಧ್ಯಾಪಕ, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಂಜನಗೂಡು, ಮೈಸೂರು ಜಿಲ್ಲೆ– 571 301

**Corresponding Author:** ಡಾ. ಜಯಶಂಕರ ಎಂ.

## Abstract
ಹನ್ನೆರಡನೆಯ ಶತಮಾನದ ವಚನ ಚಳುವಳಿ ಕನ್ನಡ ಸಾಹಿತ್ಯ ಮತ್ತು ಸಾಮಾಜಿಕ ಚರಿತ್ರೆಯಲ್ಲಿ ಸಮಾನತೆ, ಸಾಮಾಜಿಕ ನ್ಯಾಯ, ಕಾಯಕನಿಷ್ಠೆ, ಜಾತ್ಯತೀತತೆ ಹಾಗೂ ಪ್ರಜಾತಾಂತ್ರಿಕ ಮೌಲ್ಯಗಳನ್ನು ಪ್ರತಿಪಾದಿಸಿದ ಮಹತ್ವದ ಚಾರಿತ್ರಿಕ ಚಳುವಳಿಯಾಗಿದೆ. ಈ ಚಳುವಳಿಯ ವಿಶಿಷ್ಟ ಕೊಡುಗೆಗಳಲ್ಲಿ ಸ್ತ್ರೀ ಸಂವೇದನೆಯ ಅಭಿವ್ಯಕ್ತಿಯೂ ಪ್ರಮುಖವಾಗಿದೆ. ಪುರುಷಪ್ರಧಾನ, ವೈದಿಕ ಮತ್ತು ಊಳಿಗಮಾನ್ಯ ಸಾಮಾಜಿಕ ವ್ಯವಸ್ಥೆಯಲ್ಲಿ ಅಸ್ತಿತ್ವ ಕಳೆದುಕೊಂಡಿದ್ದ ಸ್ತ್ರೀಯರಿಗೆ ವಚನ ಸಾಹಿತ್ಯವು ತಮ್ಮ ಅನುಭವ, ನೋವು, ಪ್ರತಿಭಟನೆ, ಆತ್ಮವಿಶ್ವಾಸ ಮತ್ತು ಸ್ವತಂತ್ರ ಚಿಂತನೆಗಳನ್ನು ವ್ಯಕ್ತಪಡಿಸುವ ವೇದಿಕೆಯನ್ನು ಒದಗಿಸಿತು. ಅಕ್ಕಮಹಾದೇವಿ, ಗೊಗ್ಗವ್ವೆ, ನೀಲಮ್ಮ, ಮುಕ್ತಾಯಕ್ಕ, ನಾಗಲಾಂಬಿಕೆ, ಸೂಳೆ ಸಂಕವ್ವೆ, ಲಿಂಗಮ್ಮ, ಅಮುಗೆ ರಾಯಮ್ಮ ಮೊದಲಾದ ವಚನಕಾರ್ತಿಯರ ವಚನಗಳಲ್ಲಿ ಲಿಂಗ ಅಸಮಾನತೆ, ಪುರುಷಪ್ರಧಾನತೆ, ದಾಂಪತ್ಯ ಸಂಬಂಧ, ಸ್ತ್ರೀದೇಹದ ವಸ್ತೀಕರಣ, ಸಾಮಾಜಿಕ ಶೋಷಣೆ ಮತ್ತು ಆತ್ಮನಿರ್ಣಯದ ಪ್ರಶ್ನೆಗಳು ದಿಟ್ಟವಾಗಿ ವ್ಯಕ್ತವಾಗಿವೆ. ಅಲ್ಲಮ, ಬಸವಣ್ಣ, ದಾಸಿಮಯ್ಯ ಮೊದಲಾದ ಪುರುಷ ವಚನಕಾರರೂ ಸ್ತ್ರೀ–ಪುರುಷ ಸಮಾನತೆಯ ಆಶಯಕ್ಕೆ ತಾತ್ವಿಕ ನೆಲೆಯನ್ನು ನಿರ್ಮಿಸಿದ್ದಾರೆ. ಹೀಗಾಗಿ ವಚನಕಾರ್ತಿಯರ ಸ್ತ್ರೀ ಸಂವೇದನೆ ಕೇವಲ ಪ್ರತಿಭಟನೆಯ ಅಭಿವ್ಯಕ್ತಿಯಾಗಿರದೆ, ಸ್ತ್ರೀಯ ವ್ಯಕ್ತಿತ್ವ, ಅಸ್ತಿತ್ವ, ಸ್ವಾತಂತ್ರ್ಯ ಮತ್ತು ಆತ್ಮಗೌರವವನ್ನು ಪ್ರತಿಷ್ಠಾಪಿಸಿದ ಮಹತ್ವದ ಸಾಮಾಜಿಕ–ತಾತ್ವಿಕ ಚಿಂತನೆಯಾಗಿ ರೂಪುಗೊಂಡಿದೆ.

**Keywords:** ವಚನ ಸಾಹಿತ್ಯ, ಶಿವಶರಣೆಯರು, ಸ್ತ್ರೀ ಸಂವೇದನೆ, ಸ್ತ್ರೀವಾದ, ಲಿಂಗಸಮಾನತೆ, ಸ್ತ್ರೀ ಅಸ್ತಿತ್ವ, ಸ್ತ್ರೀ ಸ್ವಾತಂತ್ರ್ಯ, ಆತ್ಮಗೌರವ, ಮಹಿಳಾ ಚಿಂತನೆ, ಪುರುಷಪ್ರಧಾನ ವ್ಯವಸ್ಥೆ, ಸಾಮಾಜಿಕ ನ್ಯಾಯ, ಸಮಾನತೆ, ಸ್ತ್ರೀಶೋಷಣೆ, ದೇಹಪ್ರಜ್ಞೆ, ಸ್ತ್ರೀ ವ್ಯಕ್ತಿತ್ವ, ಅಕ್ಕಮಹಾದೇವಿ, ಗೊಗ್ಗವ್ವೆ, ನಾಗಲಾಂಬಿಕೆ, ಅಮುಗೆ ರಾಯಮ್ಮ, ವಚನ ಚಳುವಳಿ..

ಲಿಂಗ ಸಮಾನತೆ, ಸಾಮಾಜಿಕ ನ್ಯಾಯ, ಪ್ರಜಾತಾಂತ್ರಿಕತೆ, ದುಡಿಮೆಯ ನಿಷ್ಠೆ, ಜಾತ್ಯತೀತ ಮೌಲ್ಯಗಳು – ಮೊದಲಾದ ಆಧುನಿಕ ಸಮಾಜವಾದಿ ಸಮಸಮಾಜದ ಹೊಸಕಾಲದ ಮೌಲ್ಯಗಳನ್ನು ಹನ್ನೆರಡನೆಯ ಶತಮಾಣದಲ್ಲಿಯೇ ರೂಪಿಸಿ ಸಾಮಾಜಿಕ ರಚನೆಯ ಒಳಗೆ ಪರಿಚಲಿಸುವಂತೆ ಮಹತ್ತನ್ನು ಸಾಧಿಸಿದ ವಚನಯುಗವು ಕನ್ನಡ ಸಾಹಿತ್ಯಚರಿತ್ರೆಯಲ್ಲಿ ಒಂದು ಮಹತ್ತರವಾದ ಮೈಲಿಗಲ್ಲು. ಸಾಮಾಜಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ, ಸಾಹಿತ್ಯಕವಾಗಿ ಹೊಸ ಗಾಳಿ–ಗಂಧ ಸಾರ–ಸತ್ವ ಸೃಷ್ಟಿಯಾಗಿ ಜನರ ಆಲೋಚನಾ ವಿಧಾನದಲ್ಲಿ ಮತ್ತು ರೀತಿ ನೀತಿಗಳಲ್ಲಿ ಮಹತ್ತರವಾದ ಬದಲಾವಣೆಯನ್ನು ತಂದ ಕಾಲ. ಸಿದ್ಧಮಾದರಿಯ ಊಳಿಗಮಾನ್ಯ ಮೌಲ್ಯವನ್ನು ಪ್ರಶ್ನಿಸಿ, ಸಂಘರ್ಷಗಳನ್ನು ಹುಟ್ಟಿಸಿ, ಚರಿತ್ರೆಯ ಚಕ್ರವನ್ನು ಪ್ರಗತಿಪಥದ ಕಡೆಗೆ ಉರುಳಿಸಲೆತ್ನಿಸಿ, ಸಮಸಮಾಜದ ಕನಸು ಕಂಡವರು ವಚನಕಾರರು. ನಿರಂಕುಶ ಪ್ರಭುತ್ವವನ್ನು ಧೈರ್ಯವಾಗಿ, ಕಟುವಾಗಿ ಟೀಕಿಸಿದವರು. ಧಾರ್ಮಿಕವಾಗಿ ವೈದಿಕ ಧರ್ಮವನ್ನು ದಿಕ್ಕರಿಸಿ ಸಮಾನತೆಯ ನೆಲೆಯ ಹೊಸಧರ್ಮವನ್ನು ಹುಟ್ಟು ಹಾಕಿದರು. ಧಾರ್ಮಿಕಮತ್ತು ಭಕ್ತಿಯ ಆಂದೋಲನದ ಮೂಲಕಹೊಸ ಸಮಾಜವನ್ನು ಸಮ ಸಮಾಜವನ್ನು ರೂಪಿಸಲು ಯತ್ನಿಸಿದರು. ಸಾಹಿತ್ಯವೆಂದರೆ ಅದು ರಾಜಾಸ್ಥಾನಕ್ಕೆ, ಪಂಡಿತ ಮಂಡಳಿಗೆ ಮಾತ್ರ ಸೀಮಿತವಾಗಿರದೆ ಅದು ಜನಸಾಮಾನ್ಯರ ಸೊತ್ತಾಗಬಲ್ಲದು ಎಂಬುದನ್ನು ಸಾಧಿಸಿ ತೋರಿಸಿದರು. ಈ ಹಿನ್ನೆಲೆಯಲ್ಲಿ ವಚನ ಸಾಹಿತ್ಯ ಭಾರತೀಯ ಸಾಹಿತ್ಯ ಮತ್ತು ವಿಶ್ವಸಾಹಿತ್ಯ ಲೋಕದಲ್ಲಿ ಅಪರೂಪದ ಅಭಿವ್ಯಕ್ತಿಯಾಗಿದೆ.

ತನ್ನೆಲ್ಲ ಸಾಮಾಜೋ– ಸಾಂಸ್ಕೃತಿಕ ಹಿರಿಮೆಗಳ ಜೊತೆಗೇ ಹಲಬಗೆಯ ಅಸಮಾನತೆಗಳ ಕೂಪವಾಗಿರುವ ಭಾರತೀಯ ಸಮಾಜದಲ್ಲಿ ವರ್ಗಅಸಮಾನತೆಗೆ ಎಷ್ಟು ದೊಡ್ಡ ಇತಿಹಾಸವಿದೆಯೋ ಅಷ್ಟೇ ದೊಡ್ಡಇತಿಹಾಸ ಲಿಂಗ ಅಸಮಾನತೆಯಲ್ಲಿ ಇದೆ. ಸ್ಥಾಪಿತ ಪುರುಷಪ್ರಧಾನ ಸಮಾಜದಲ್ಲಿ ಹೆಣ್ಣುತನ್ನ ಅಸ್ಮಿತೆಯನ್ನು ಕಂಡುಕೊಳ್ಳಬೇಕಾದ ಸಾಮಾಜಿಕ ವಾಸ್ತವ ಇದೆ. ಕನ್ನಡ ಸಾಹಿತ್ಯಚರಿತ್ರೆ ಬೆಳೆದು ಬಂದ ಹಾದಿಯನ್ನು ಗಮನಿಸಿದರೆ ಹೆಣ್ಣುತನ್ನ ಅಸ್ತಿತ್ವಕ್ಕಾಗಿ ಸಮುದಾಯಿಕ ಹೋರಾಟ ನಡೆಸಿರುವುದನ್ನು, ಮೊಟ್ಟಮೊದಲ ಬಾರಿಗೆ ಈ ಸಮಾಜದ ವಿರುದ್ಧ ಸೆಟೆದು ನಿಂತಿರುವುದನ್ನು ಗಮನಿಸುವುದಾದರೆ ಅದು ವಚನ ಯುಗದಲ್ಲಿ. ಅಕ್ಕಮಹಾದೇವಿ, ಗಂಗಾಭಿಕೆ, ನೀಲಮ್ಮ, ಮುಕ್ತಾಯಕ್ಕ, ಗೊಗ್ಗವ್ವೆ, ಸೂಳೆಸಂಕವ್ವೆ, ಸದಾಚಾರಿ ಸತ್ಯಕ್ಕ, ಆಯ್ದಕ್ಕಿ ಲಕ್ಕಮ್ಮ, ಅಮುಗೆ ರಾಯಮ್ಮ ಮೊದಲಾದ ವಚನಕಾರ್ತಿಯರು ತಮ್ಮ ಆಲೋಚನೆ ಮತ್ತು ಅಭಿವ್ಯಕ್ತಿ ಕ್ರಮದಲ್ಲಿ ದಿಟ್ಟತನವನ್ನು ಪ್ರದರ್ಶಿಸಿದರು.ತಮ್ಮ

ನೋವು ನಲಿವುಗಳನ್ನು, ಸಾಮಾಜಿಕ ಅಸಮಾನತೆಯನ್ನು, ಲಿಂಗ ತಾರತಮ್ಯವನ್ನು, ಕಾಯಕನಿಷ್ಠೆಯನ್ನು ಹೊಸ ನೈತಿಕ ಮೌಲ್ಯಗಳನ್ನು ತಮ್ಮ ವಚನಗಳ ಮೂಲಕ ಹೇಳುವ ಪ್ರಯತ್ನ ಮಾಡಿದರು. ಅಂತೆಯೇ ಹನ್ನೆರಡನೇ ಶತಮಾನದ ಆಗುಹೋಗುಗಳಿಗೆ ತೀವ್ರವಾಗಿ ಸ್ಪಂದಿಸಿದ ಅಲ್ಲಮ, ಬಸವಣ್ಣ, ಸಿದ್ದರಾಮ, ಜೇಡರ ದಾಸಿಮಯ್ಯ ಮೊದಲಾದ ವಚನಕಾರರು ಸ್ತ್ರೀಯರನ್ನು ಸಹಾನುಭೂತಿಯ ನೆಲೆಯಲ್ಲಿ ನೋಡುತ್ತಲೇ, ಹೆಣ್ಣು– ಗಂಡಿನ ಸಮಾನತೆಯನ್ನು ಸಾಧಿಸಲು ಅಗತ್ಯವಾದ ನೆಲೆಗಟ್ಟನ್ನು ರೂಪಿಸಿಕೊಟ್ಟಿದ್ದಾರೆ.

ಅಕ್ಷರ, ಅಭಿವ್ಯಕ್ತಿ ಮತ್ತು ಮುಕ್ತ ಆಲೋಚನೆಗಳಿಗೆ ತಳಹದಿ ದೊರೆತು, ಪುರುಷ ಪ್ರಧಾನ ಸಮಾಜದ ಚೌಕಟ್ಟು, ನಿರ್ಬಂಧಗಳ ನಡುವೆ ತನ್ನನ್ನು ತಾನೇ ಮರೆತಿದ್ದ ಸ್ತ್ರೀಗೆ 'ವಚನ' ತನ್ನ ಭಾವನೆ, ಅಭಿಪ್ರಾಯ, ನೋವನ್ನು ಅಭಿವ್ಯಕ್ತಿಸಲು ಮಾಧ್ಯಮವಾಯಿತು. ತನ್ನೊಳಗನ್ನು ಕಂಡುತನ್ನ ಅಸ್ತಿತ್ವವನ್ನು ಸ್ಥಾಪಿಸಲು ಯತ್ನಿಸಿದ್ದು ಮಾತ್ರವಲ್ಲ, ಇತರ ಹೆಣ್ಣು ಮಕ್ಕಳ ಬದುಕನ್ನು ಕಟ್ಟಿಕೊಡುವಲ್ಲಿ ಪ್ರೇರಣ ಶಕ್ತಿಯಾದಳು. ವೈದಿಕ ಪರಂಪರೆ ಜಾತಿ ಮತ್ತು ಲಿಂಗ ಆಧಾರಿತ ತರತಮಗಳನ್ನು ಸೃಷ್ಟಿಸಿ ಆ ಮೂಲಕ ಅಸಮಾನತೆಗಳನ್ನು ನಿರ್ಮಿಸಿತ್ತು. ಸ್ತ್ರೀಯರಿಗೆ ಮೋಕ್ಷವೇ ಇಲ್ಲ ಎನ್ನುವ ವಾದವನ್ನು ಮಂಡಿಸುತ್ತಾ ಗಂಡಿನ ಸೇವೆಯೇ ಅವಳ ಪಾಲಿನ ಪರಮಕರ್ತವ್ಯ ಎಂದು ಬಿಂಬಿಸಲಾಗಿತ್ತು. ಇಂಥ ಹಲವು ಸ್ಥಾಪಿತ ಮೌಲ್ಯಗಳನ್ನು ವಚನಕಾರರು ಮುರಿದದ್ದು ಚಾರಿತ್ರಿಕವಾಗಿ ಮಹತ್ತರವಾದುದು.

ಸ್ತ್ರೀಗೆ ಮುಕ್ತಿಯೇ ಇಲ್ಲವೆಂದು ಸಾರುವ ಪುರೋಹಿತಶಾಹಿ, ವೈದಿಕಪ್ರಧಾನ ಜೀವನವಿಧಾನಗಳ ನಡುವೆ ಸತಿಪತಿಗಳೊಂದಾದ ಭಕ್ತಿ, ಹಿತವಪ್ಪುದು ಶಿವಂಗೆ ಎನ್ನುವ ಬಸವಣ್ಣನವರ ಮಾತು ಹಾಗೂ ಸತಿಪತಿಗಳೊಂದಾಗದ ಭಕ್ತಿ, ಅಮೃತದೊಳು ವಿಷ ಬೆರೆಸಿದಂತೆ ಎನ್ನುವ ಜೇಡರ ದಾಸಿಮಯ್ಯನ ಮಾತು ವಚನಕಾರರು ಸಾಧಿಸಲೆತ್ನಿಸಿದ ಲಿಂಗ ಸಮಾನತೆಯ ಹಿನ್ನೆಲೆಯಲ್ಲಿ ಬಹು ಮುಖ್ಯವಾದವು. ಅಲ್ಲದೆ ಪತಿಯೇ ಪರದೈವಎನ್ನುವ ನಂಬಿಕೆಗಳನ್ನು ಇವು ಪಲ್ಲಟಗೊಳಿಸಿದವು.

ಆಳುತನದ ಮಾತನೇರಿಸಿ ನುಡಿದಡೆ
ಆಗಳೇ ಕಟ್ಟಿದೆನು ಗಂಡುಗಚ್ಚೆಯ
ತಿರುಗನೇರಿಸಿ ತಿಲಕವನಿಟ್ಟು
ಕೈದುವ ಕೊಂಡು ಕಳನೇರಿದ ಬಳಿಕ
ಕಟ್ಟಿದ ನಿರಿ ಸಡಿಲಿದಡೆ ನಿಮ್ಮಾಣೆ
ಕಾಣಾ ಚನ್ನಮಲ್ಲಿಕಾರ್ಜುನ

ಎನ್ನುವ ಅಕ್ಕ, ವೀರತನದ ಲಕ್ಷಣವನ್ನು ಹೇಳುವುದರ ಜೊತೆಗೆ, ವ್ಯಕ್ತಿ ತತ್ವನಿಷ್ಠನಾಗಿದ್ದರೆ, ಆದರ್ಶಕ್ಕೆ ಬದ್ಧನಾಗಿದ್ದರೆಯಾವುದೇ ಸಂದರ್ಭದಲ್ಲಿ ಹಿಮ್ಮೆಟ್ಟುವುದಿಲ್ಲ. 'ಕಟ್ಟಿದ ನಿರಿ ಸಡಿಲಿದಡೆ ನಿಮ್ಮಾಣೆ' ಎಂಬ ಸಾಲುಗಳು ಅಕ್ಕನ ತತ್ವನಿಷ್ಠೆ ಎಷ್ಟು ಬಲವಾಗಿತ್ತು ಎಂಬುದನ್ನು ದಾಖಲಿಸುತ್ತದೆ.

ತಾಳ್ಮೆ, ಸಹನೆ, ಔದಾರ್ಯದ ಸುಳಿಯಲ್ಲಿ ಮಹಿಳರಯರನ್ನು ಮುಳುಗಿಸಿ, ಪುರುಷಪ್ರಧಾನ ಸಮಾಜವು ಒಪ್ಪಿತ ಮೌಲ್ಯಗಳನ್ನು ಪರಿಪಾಲಿಸುತ್ತಾ ಬಂದ ಮಹಿಳೆಯರನ್ನು ಆದರ್ಶನಾರಿ ಎಂಬ ಹೆಗ್ಗಳಿಕೆಯ ಕೊಂಡಿಯಲ್ಲಿ ಸಿಕ್ಕಿ ಹಾಕಿಸುತ್ತಾ ಬಂದಿತ್ತು. ಶಿವಶರಣೆಯರು ಅದರಲ್ಲೂ ಮೊದಲಿಗೆ, ಅಕ್ಕ ಮಹಾದೇವಿ ಪುರುಷ ನಿರ್ಮಿತ ಚೌಕಟ್ಟುಗಳನ್ನು ಮೀರುವ ಪ್ರಯತ್ನವನ್ನು ಮಾಡಿದಳು. ಸಾಂಪ್ರದಾಯಿಕ ಸಾಮಾಜಿಕ ರಚನೆಯೊಳಗೆ ತನ್ನ ಪತಿ ಕೌಶಿಕ ರಾಜನನ್ನು ಧಿಕ್ಕರಿಸುವುದು ಅಸಾಮಾನ್ಯವಾದುದು. ಮದುವೆಯಾಗಲು ಅಕ್ಕ ನಿರಾಕರಿಸಿದಾಗ ಅನೇಕರ ಬುದ್ಧಿ ಮಾತನ್ನು ಕೇಳಬೇಕಾಗುತ್ತದೆ. ಆದರೂ ತನ್ನ ಮನದ ನೋವನ್ನು ಹಿಂಜರಿಕೆ ಇಲ್ಲದೆ ಪ್ರಕಟಿಸುವಳು.

ಬಂಜೆಯ ಬೆನೆಯನರಿಯಳು ಮಲತಾಯಿ ಮುದ್ದ ಬಲ್ಲಳೆ
ನೊಂದವರ ನೋವ ನೋಯದವರೆತ್ತ ಬಲ್ಲರು

ಎನ್ನುತ್ತಾಳೆ. ಗಂಡನನ್ನು ಒಡೆಯನಾಗಿಸಿ ಹೆಣ್ಣನ್ನು ಒಡವೆಯಂತೆ, ಗಂಡು ಅನುಭವಿಸಬೇಕಾದ ಸಂಪತ್ತಿನಂತೆ, ಗಂಡಿನ ಪಾರುಪತ್ಯದಲ್ಲಿ ಜೀವಿಸಬೇಕೆಂಬ ಮನಸ್ಥಿತಿಯನ್ನು ತೊಡೆದ ಅಕ್ಕ

ಗಂಡ ಮನೆಗೆ ಒಡೆಯನಲ್ಲ
ಹೆಂಡತಿ ಮನೆಗೆ ಒಡತಿಯೆ? ಒಡತಿಲ್ಲ
ಗಂಡ ಹೆಂಡಿರ ಸಂಬಂಧವಯ್ಯಗಂಡುಗಲಿಯೇ

ಎನ್ನುತ್ತಾಳೆ.

ಅಕ್ಕ ಮಹಾದೇವಿ ಮಾತ್ರ ಲಿಂಗ ಅಸಮಾನತೆಯ ವಿರುದ್ದ ಮಾತನಾಡಲಿಲ್ಲ. ಕೆಳವರ್ಗದ ವಚನಕಾರ್ತಿಯರಾದ ಗೊಗ್ಗವ್ವೆ, ಲಿಂಗಮ್ಮ ಅವರ ನಿಲುವುಗಳು ಮಹತ್ತರವಾದವು.

ಗಂಡು ಮೋಹಿಸಿ ಹೆಣ್ಣ ಹಿಡಿದಡೆ
ಅದು ಒಬ್ಬರ ಒಡವೆ ಎಂದು ಅರಿಯಬೇಕು
ಹೆಣ್ಣು ಮೋಹಿಸಿ ಗಂಡ ಹಿಡಿದಡೆ
ಉತ್ತರವಾವುದೆಂದರಿಯಬೇಕು
ಈ ಎರಡರ ಉಭಯವ ಕಳೆದು ಸುಖಿ ತಾನಾಗಬಲ್ಲಡೆ
ನಾಸ್ತಿನಾಥನು ಪರಿಪೂರ್ಣನೆಂಬೆ

ಎನ್ನುತ್ತಾಳೆ ಗೊಗ್ಗವ್ವೆ.

'ಅಂಗವ ಮೆರೆದವರಿಗೆ ಲಿಂಗದ ಹಂಗೇಕೋ', 'ಈ ಸಾವ ಕೊಡುವಗಂಡರನೊಯ್ದು ಒಲೆಯೊಳಗಿಕ್ಕು', 'ಈ ಬಂಡರಕುಂಡೆಯ ಮೇಲೆ ಜಾಡಿಸಿ ಒದೆಯಬೇಕು'. ಈ ಮಾತುಗಳನ್ನು ಗಮನಿಸಿದರೆ ಹೆಣ್ಣು ಮಾತನಾಡುವುದೇ ದೊಡ್ಡ ಅಪರಾದ ಎಂದು ಭಾವಿಸುವ ಸಮಾಜದಲ್ಲಿ ವಚನಕಾರರು ಯಾವ ಬಗೆಯ ಸ್ತ್ರೀಪರವಾದ ನಿಲುವುಗಳನ್ನು ಸಾಧಿಸದರು ಎಂಬುದು ಅರಿವಾಗುತ್ತದೆ.

'ಅಟ್ಟಡವಿಯಲ್ಲಿ ಬಿಟ್ಟು ಹೋದಿರಿ ಬಸವಯ್ಯ, ನಟ್ಟ ನಡುಗ್ರಾಮವ ತೊರೆದು ಹೋದಿರಿ ಬಸವಯ್ಯ' ನಾಗಲಾಂಬಿಕೆಯ ಈ ಮಾತುಗಳು, ತನ್ನ ಅಸ್ತಿತ್ವವನ್ನು ಪ್ರಶ್ನಿಸುತ್ತಾ ಪುರುಷನ ಅಡಿಯಲ್ಲಿ ಬದುಕಬೇಕಾದ ಹೆಣ್ಣಿನ ಅಸಹಾಯಕತೆ, ಯಾತನೆಯನ್ನು ನಿರೂಪಿಸುತ್ತದೆ. ಸೂಳೆ ಸಂಕವ್ವನ ಈ ಕೆಳಗಿನ ಒಂದು ವಚನ ಇದಕ್ಕೆ ಸಂವಾದಿಯಾಗಿದೆ:

ಒತ್ತೆಯ ಹಿಡಿದು ಮತ್ತೊತ್ತೆಯಹಿಡಿದಡೆ
ಬತ್ತಲೆ ನಿಲ್ಲಿಸಿ ಕೊಲುವರಯ್ಯ
ವ್ರತಹೀನನ ನೆರೆದು ಬೆರೆದಡೆ
ಕಾದ ಕತ್ತಿಯಲಿ ಕೈ ಕಿವಿ ಮೂಗ ಕೊಯ್ಯುವರಯ್ಯ
ಒಲ್ಲೆನೊಲ್ಲೆ ಬಲ್ಲೆನಾಗಿ ನಿಮ್ಮಾಣೆ ನಿರ್ಲಜ್ಜೇಶ್ವರಾ

ಇಲ್ಲಿ ಸ್ತ್ರೀಯರ ಮೇಲಿನ ಶೋಷಣೆ, ದಬ್ಬಾಳಿಕೆ, ದೌರ್ಜನ್ಯವನ್ನು ಪ್ರಸ್ತಾಪಿಸುತ್ತಾ ಸ್ತ್ರೀಯರಿಗೆ ಸಂದೇಶವನ್ನು ನೀಡುತ್ತಾಳೆ. ಶೋಷಣೆಯನ್ನು ಸಹಿಸುತ್ತಾ ಹೋದರೆ ತಮ್ಮತನ ಕಳೆದು ಹೋಗುತ್ತದೆ ಹಾಗಾಗಿ ಜಾಣರಾಗಿ ನಿಮ್ಮ ಸ್ವಂತ ವ್ಯಕ್ತಿತ್ವವನ್ನು ಕಟ್ಟಿಕೊಳ್ಳಿ ಎನ್ನುತ್ತಾಳೆ ಅಕ್ಕ:

ಹೆದರದಿರು ಮನವೆ ಬೆದರದಿರು ತನುವೆ
ನಿಜವನರಿದು ನಿಶ್ಚಿಂತವಾಗಿರಲೆ ಮನವೆ
ಫಲವಾದ ಮರನ ಕಲ್ಲಲಿ ಇಡುವುದೊಂದು ಕೋಟಿ
ಎಲವದ ಮರನ ಇಡುವರೊಬ್ಬರ ಕಾಣೇ
ಭಕ್ತಿಯುಳ್ಳವರ ಬೈವರೊಂದು ಕೋಟಿ
ಭಕ್ತಿ ಇಲ್ಲದವರ ಬೈವರೊಬ್ಬರ ಕಾಣೆ
ನಿಮ್ಮ ಶರಣರೊಬ್ಬರ ನುಡಿಯೇ ಎನಗೆ ಗತಿ ಸೋಪಾನ
ಚನ್ನಮಲ್ಲಿಕಾರ್ಜುನ

ಅಕ್ಕನ ಈ ವಚನದಲ್ಲಿ ನೇರ, ದಿಟ್ಟ ಮನೋಭಾವವನ್ನು ಕಾಣಬಹುದು. ನಿಜವರಿದು ನಿಶ್ಚಿಂತವಾಗಿ ಸತ್ಪತ ಸದಾಚಾರವನ್ನು ಹೊಂದಿ ಮಾಡುವ ಕ್ರಿಯೆ ತಪ್ಪಿಲ್ಲವೆಂದ ಮೇಲೆ ಯಾರಿಗೆ ಏತಕ್ಕಾಗಿ ಹೆದರಬೇಕು? ತನಗೆ ಸರಿ ಎನಿಸಿದ್ದನ್ನು ಮಾಡುತ್ತಾ, ಶರಣರ ಅನುಭಾವ ನುಡಿಗಳನ್ನು ಮಾರ್ಗದರ್ಶನವಾಗಿಟ್ಟುಕೊಂಡು ಯಶಸ್ಸಿನ ಮೆಟ್ಟಲನ್ನೇರಬೇಕು ಎನ್ನುತ್ತಾಳೆ. ಮಹಿಳೆಯರು ಈ ದೇಶದಲ್ಲಿ

ಸಾವಿರಾರು ವರ್ಷಗಳಿಂದ ಮನುಧರ್ಮದ ಪುರುಷ ಪ್ರಧಾನವಾದ ವರ್ಣವ್ಯವಸ್ಥೆಯಿಂದ ಪಡಬಾರದ ಕಷ್ಟ ಪಟ್ಟಿದ್ದಾರೆ. ವೈದಿಕ ಧರ್ಮದ ಪ್ರಕಾರ ಸ್ತ್ರೀಯರಿಗೆ ವೇದಾಧ್ಯಯನದ ಅಧಿಕಾರವಿಲ್ಲ, ಜನಿವಾರವಿಲ್ಲ, ಮುಕ್ತಿಯಿಲ್ಲ ಎಂಬ ನಿರಾಕರಣೆಯನ್ನು ಈ ವಚನ ಎತ್ತಿತೋರಿಸುತ್ತಿದೆ.

ತಾ ಮಾಡಿದ ಹೆಣ್ಣು ತನ್ನ ತಲೆಯನ್ನೇರಿತ್ತು
ತಾ ಮಾಡಿದ ಹೆಣ್ಣು ತನ್ನ ತೊಡೆಯನ್ನೇರಿತ್ತು
ತಾ ಮಾಡಿದ ಹೆಣ್ಣು ಬ್ರಹ್ಮನ ನಾಲಿಗೆಯನ್ನೇರಿತ್ತು
ತಾ ಮಾಡಿದ ಹೆಣ್ಣು ನಾರಾಯಣನ ಎದೆಯನ್ನೇರಿತ್ತು
ಅದಕ್ಕೆಕಾರಣ ಹೆಣ್ಣು ಹೆಣ್ಣಲ್ಲ ಹೆಣ್ಣು ರಾಕ್ಷಸಿಯಲ್ಲ
ಹೆಣ್ಣು ಪ್ರತ್ಯಕ್ಷ ದೇವರು ಕಪಿಲ ಸಿದ್ದಮಲ್ಲಿಕಾರ್ಜುನ ನೋಡಾ

ತಮ್ಮ ತಮ್ಮ ಗಂಡನ ಬಳಿ ಎಲ್ಲಿ ಸ್ಥಾನ ಪಡೆದರೆಂದು ಹೇಳುತ್ತಾ ಹೆಣ್ಣು ಕೇವಲ ಮೋಹಕ ಭೋಗದ ವಸ್ತುವಲ್ಲ ರಾಕ್ಷಸಿಯೂ ಅಲ್ಲ ಮಾಯೆಯಲ್ಲ ಪ್ರತ್ಯಕ್ಷದೇವರುಎನ್ನುತ್ತದೆ ಮೇಲಿ ವಚನ.

ಹೆಣ್ಣು ಮಾಯೆ ಎಂಬ ಪುರುಷ ನಿರ್ದೇಶಿತವಾದ ಒಪ್ಪಿತ ಮೌಲ್ಯವನ್ನು ಭಗ್ನಗೊಳಿಸಿದ್ದು ವಚನ ಚಳುವಳಿಯ ಮಹತ್ತರವಾದನಿಲುವು. ಈ ಹಿನ್ನೆಲೆಯಲ್ಲಿಅಲ್ಲಮನ ಈ ವಚನ ಬಹು ಮುಖ್ಯವಾದುದು:

ಹೆಣ್ಣು ಮಾಯೆಎಂಬರು ಹೆಣ್ಣು ಮಾಯೆಯಲ್ಲ
ಮಣ್ಣು ಮಾಯೆಎಂಬರು ಮಣ್ಣು ಮಾಯೆಯಲ್ಲ
ಹೊನ್ನು ಮಾಯೆಎಂಬರು ಹೊನ್ನು ಮಾಯೆಯಲ್ಲ
ಮನದ ಮುಂದಣಆಶೆಯೇ ಮಾಯೆಕಾಣಗುಹೇಶ್ವರಾ

ಮಾಯೆಯ ವಿಚಾರದಲ್ಲಿ ಬದಲಾದ ಈ ನೋಟಕ್ರಮ ಸ್ತ್ರೀಯರನ್ನು ಹೊಸ ಆಯಾಮದಿಂದ ಪರಿಭಾವಿಸುವ ಅಗತ್ಯವನ್ನು ಮನಗಾಣಿಸಿತು. ಹಾಗೆಯೇ ಅಕ್ಕ ಸಹ ಮಾಯೆಯ ಪರಿಕಲ್ಪನೆಯನ್ನು ಔಚಿತ್ಯಪೂರ್ಣವಾಗಿ ತನ್ನ ವಚನದ ಮೂಲಕ ಹೀಗೆ ವ್ಯಾಖ್ಯಾನಿಸಿದ್ದಾಳೆ:

ಪುರುಷನ ಮುಂದೆ ಮಾಯೆ
ಸ್ತ್ರೀಯೆಂಬ ಅಭಿಮಾನವಾಗಿಕಾಡುವುದು
ಸ್ತ್ರೀ ಮುಂದೆ ಮಾಯೆ
ಪುರುಷನೆಂಬ ಅಭಿಮಾನವಾಗಿಕಾಡುವುದು
ಹೆಣ್ಣಿಗೆಗಂಡು ಮಾಯೆ
ಗಂಡಿಗೆ ಹೆಣ್ಣು ಮಾಯೆ

ಅಕ್ಕನ ಈ ಒಳನೋಟ ಮಾಯೆಯ ಬಗೆಗಿನ ಸ್ಥಾಪಿತ ಆಲೋಚನೆಗಳನ್ನೇ ಪಲ್ಲಟಗೊಳಿಸಿದೆ. ಮಹಿಳಾ ಸಂವೇದನೆಯನ್ನು ರೂಪಿಸುವಲ್ಲಿ ಅದುವರೆಗೂ ಮರೆಮಾಚಲಾಗಿದ್ದ ತನಗೆ ಒಂದು ವ್ಯಕ್ತಿತ್ವವನ್ನು ಕಟ್ಟಿಕೊಂಡದ್ದು ವಚನಕಾರ್ತಿಯರ ಒಂದು ಮಹತ್ವದ ನೆಲೆ. ಆತ್ಮವಿಶ್ವಾಸವನ್ನು ತುಂಬಿಕೊಂಡದ್ದು ಒಂದು ಚಾರಿತ್ರಿಕ ಚಲನೆ.

ಹಾಗೆಯೇ ಹೆಣ್ಣಿನ ಸ್ಥಿತಿಯನ್ನು ಅವಲೋಕನ ಮಾಡಿಕೊಂಡದ್ದು, ಆ ಮೂಲಕ ತಾನು ಯಾವ ಕ್ರಿಯಾತ್ಮಕ, ರಚನಾತ್ಮಕ ಹಂತಗಳನ್ನು ದಾಟಬೇಕು, ಯಾವ ನಿಲುವುಗಳನ್ನು ತಾಳಬೇಕು ಎಂದು ಹೆಣ್ಣು ತನ್ನ ಕುರಿತು ತಾನು ಆಲೋಚಿಸದ್ದು ಬಹುಶ ವಚನಯುಗವೇ ಅನಿಸುತ್ತದೆ. ಹೀಗೆ ತಾನು ಈಗ ಗಟ್ಟಿಯಾಗಿ ನಿಲ್ಲಲು, ತನ್ನ ಮುಂದಿನ ಹೆಜ್ಜೆಯನರಿಯಲು, ಹಿಂದಣ ಹೆಜ್ಜೆಯನ್ನು ಅರಿಯಲೆತ್ನಿಸಿದ ಪ್ರಯತ್ನವೂ ಮಹತ್ತರವಾದುದಾಗಿದೆ. ಈ ಹಿನ್ನೆಲೆಯಲ್ಲಿಯೂ ಅಕ್ಕನ ಈ ಕೆಳಗಿನ ವಚನ ಎಷ್ಟು ಮುಖ್ಯವಾದುದು ಎಂದು ಗಮನಿಸಬಹುದು.

ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವಾ
ಏರಿಲ್ಲದ ಗಾಯದಲ್ಲಿ ನೊಂದೆನವ್ವಾ

ಸುಖವಿಲ್ಲದೆ ಧಾವತಿಗೊಂಡೆನವ್ವಾ
ಚೆನ್ನಮಲ್ಲಿಕಾರ್ಜುನದೇವಂಗೊಲಿದು
ಬಾರದ ಭವಂಗಳಲ್ಲಿ ಬಂದೆನವ್ವಾ.

ಕಾಮವುಳ್ಳವರಿಗೆ ಕಾಯಸಂಗ ಮಚ್ಚು ನೋಡಾ.
ಕಾಮವಿಲ್ಲದವರಿಗೆ ಲಿಂಗಸಂಗ ಮಚ್ಚು ನೋಡಾ.
ಕಾಮವಿಕಾರಿ ಕಾಯದತ್ತ ಮುಂತಾದಡೆ,
ನಾ ನಿಮ್ಮತ್ತ ಮುಂತಾದೆ, ಚೆನ್ನಮಲ್ಲಿಕಾರ್ಜುನಯ್ಯಾ,
ಕಾಮವಿಕಾರಿಯ ಸಂಗವ ಹೊದ್ದಿದಡೆ ನಿಮ್ಮಾಣೆ.

ಎನ್ನ ಮನವ ಮಾರುಗೊಂಡನವ್ವಾ,
ಎನ್ನ ತನುವ ಸೂರೆಗೊಂಡನವ್ವಾ,
ಎನ್ನ ಸುಖವನೊಪ್ಪುಗೊಂಡನವ್ವಾ.
ಎನ್ನ ಇರವನಿಂಬುಗೊಂಡನವ್ವಾ.
ಚೆನ್ನಮಲ್ಲಿಕಾರ್ಜುನನ ಒಲುಮೆಯವಳಾನು.

ಎನ್ನ ಕಾಯ ಮಣ್ಣು, ಜೀವ ಬಯಲು, ಆವುದ ಹಿಡಿವೆನಯ್ಯಾ.
ದೇವಾ, ನಿಮ್ಮನಾವ ಪರಿಯಲ್ಲಿ ನೆನೆವೆನಯ್ಯಾ ?
ಎನ್ನ ಮಾಯೆಯನು ಮಾಣಿಸಯ್ಯಾ ಚೆನ್ನಮಲ್ಲಿಕಾರ್ಜುನಾ.

ಸ್ತ್ರೀ ದೇಹವನ್ನು ಒಡವೆ, ಆಸ್ತಿ, ಅನುಭವಿಸಲೆಂದೇ ಇರುವ ಭೋಗದ ವಸ್ತು ಇಂದು ಪರಿಭಾವಿಸಲಾಗಿದ್ದ ಸಾವಿರಾರು ವರ್ಷಗಳ ಸಿದ್ಧಮಾದರಿಗಳನ್ನು ಮುರಿದು ಕಟ್ಟಿದ್ದು ವಚನ ಯುಗದ ಮಹಿಳಾ ಸಂವೇದನೆಯ ಆಯಾಮದಿಂದ ಮಹತ್ತರವಾದಒಂದು ಚಲನೆ.

ಎನ್ನ ಕಾಯ ಮಣ್ಣು, ಜೀವ ಬಯಲು
ಆವುದ ಹಿಡಿವೆನಯ್ಯದೇವ?
ನಿಮ್ಮನಾವ ಪರಿಯಲಿ ನಾ ನೆನೆವೆನಯ್ಯ?
ಎನ್ನ ಮಾಯವನು ಮಾಣಿಸಯ್ಯ ಚೆನ್ನಮಲ್ಲಿಕಾರ್ಜುನಯ್ಯ

ದೈಹಿಕ ಕಾಯದ ರೂಪದ ಆಚೆಗೆ ಮಹಿಳೆಗೆ ಇರುವ 'ಸ್ತ್ರೀತ್ವ'ದ ಗುರುತನ್ನು ಪ್ರತಿಪಾದಿಸುವ ಅಕ್ಕನ ಮೇಲಿನ ವಚನದಂತೆಯೇ ದೇಹವನ್ನು ನಿರಾಕರಿಸಿ, ಮನ ಮತ್ತು ಮನದೊಳಗಣ ಜೀವನಪ್ರೇಮ, ಕನಸು, ಅನನ್ಯತೆಗಳನ್ನು ಒಪ್ಪಿಕೊಳ್ಳುವಂತೆ ಪುರುಷನ ಎದುರು ರೂಪುಪಡೆಯಲಾರಂಭಿಸಿದ ಸ್ತ್ರೀ ವ್ಯಕ್ತಿತ್ವದ ಸ್ವರೂಪ ಇಂಥ ವಚನಗಳಿಂದ ತಿಳಿಯುತ್ತದೆ. ಹಡಪದ ಅಪ್ಪಣ್ಣನ ಪುಣ್ಯಸ್ತ್ರೀ ಲಿಂಗಮ್ಮನ ಈ ವಚನವೂ ಮೇಲಿನ ದೃಷ್ಟಿಕೋನದಿಂದ ಬಹುಮುಖ್ಯವಾದ ವಚನ ಅನಿಸುತ್ತದೆ.

ತನುಕರಗಿತ್ತು
ಮನ ನಿಂದಿತ್ತು
ಉಲುಹು ಅಡಗಿತ್ತು
ನೆಲೆ ನಿಂದಿತ್ತು
ಮನ ಪವನ ಬಿಂದು ಒಡಗೂಡಿತ್ತು...

ತನು ನಷ್ಟವಾದಡೇನಯ್ಯ
ಮನನಷ್ಟವಾಗದನ್ನಕ್ಕ
ವಾಕ್ಕು ನಷ್ಟವಾದಡೇನಯ್ಯ
ಬೇಕು ಬೇಡವೆಂಬುದಳಿಯದನ್ನಕ್ಕ
ಅಂಗಸುಖ ನಷ್ಟವಾದಡೇನಯ್ಯ
ಕಂಗಳಪಟಲ ಹರಿಯದನ್ನಕ್ಕ

ಮನ ಮುಗ್ಧವಾದಡೇನಯ್ಯ
ಅಹಂ ಎಂಬುದ ಬಿಡದನ್ನಕ್ಕ
ಇವೆಲ್ಲರೊಳಗಿದ್ದು ವಲ್ಲಭನೆನಿಸಿಕೊಂಬವರ ನುಡಿಯ ಒಲ್ಲರು
ನಮ್ಮ ಅಪ್ಪಣ್ಣಪ್ರಿಯ ಚೆನ್ನಬಸವಣ್ಣ

ಅತ್ಯಂತ ಸೂಕ್ಷ್ಮ ಸಂವೇದನೆಯ ವಚನಕಾರ್ತಿ ಅಮುಗೆ ರಾಯಮ್ಮ ಈ ಕೆಳಗಿನ ವಚನದ ಮೂಲಕ ಕೊನೆಗೂ ಹೆಣ್ಣು ತನ್ನದು ಮಾತ್ರವಾದ ಮಾನಸಿಕವಾದ ದೈಹಿಕವಾದ ಮತ್ತು ಭಾವನಾತ್ಮಕವಾದ ಒಳಲೋಕವೊಂದನ್ನು ಹೊಂದಿದ್ದು, ಗಂಡು ಎಂದಿಗೂ ಸ್ತ್ರೀಯ ಮನೋಲೋಕವನ್ನು ಅರಿಯಲಾರ ಎಂಬುದನ್ನು ಹಾಗೂ ಹೆಣ್ಣು ತನ್ನ ಸ್ತ್ರೀತ್ವದ ನೆಲೆಯಲ್ಲಿ ತನ್ನನ್ನ ತಾನೇ ಸಂಭಾಳಿಸಿಕೊಂಡು ಪರಿಪೂರ್ಣತೆಯನ್ನು ಹೊಂದಬಲ್ಲಳು ಎಂಬ ಆತ್ಮವಿಶ್ವಾಸದ ದೃಢ ನಿರ್ಧಾರವನ್ನು ಪ್ರಕಟಿಸುತ್ತಾಳೆ.

ಎನ್ನ ಕಣ್ಣೊಳಗಣ ಕಟ್ಟಿಗೆಯ ಮುರಿವವರನಾರನೂ ಕಾಣೆ.
ಎನ್ನ ಕಾಲೊಳಗಣ ಮುಳ್ಳ ತೆಗೆವವರನಾರನೂ ಕಾಣೆ.
ಎನ್ನ ಅಂಗದಲ್ಲಿದ್ದ ಅಹಂಕಾರವ ಸುಡುವವರನಾರನೂ ಕಾಣೆ.
ಎನ್ನ ಮನದಲ್ಲಿಪ್ಪ ಮಾಯಾ ಪ್ರಪಂಚುವ ಕೆಡಿಸುವವರನಾರನೂ ಕಾಣೆನಯ್ಯಾ.
ಆದ್ಯರ ವೇದ್ಯರ ವಚನಂಗಳಿಂದ ಅರಿದೆವೆಂಬವರು ಅರಿಯಲಾರರು ನೋಡಾ.
ಎನ್ನ ಕಣ್ಣೊಳಗಣ ಕಟ್ಟಿಗೆಯ ನಾನೆ ಮುರಿಯಬೇಕು.
ಎನ್ನ ಕಾಲೊಳಗಣ ಮುಳ್ಳ ನಾನೆ ತೆಗೆಯಬೇಕು.
ಎನ್ನ ಅಂಗದಲ್ಲಿಪ್ಪ ಅಹಂಕಾರವ ನಾನೆ ಸುಡಬೇಕು.
ಎನ್ನ ಮನದಲ್ಲಿಪ್ಪ ಮಾಯಾ ಪ್ರಪಂಚವ ನಾನೆ ಕಳೆಯಬೇಕು.
ಅಮುಗೇಶ್ವರಲಿಂಗವ ನಾನೆ ಅರಿಯಬೇಕು.

ಹೀಗೆ ಶರಣೆಯರು ಮೊದಲ ಬಾರಿಗೆಲಿಂಗ ಅಸಮಾನತೆಯ ತಳಹದಿಯಲ್ಲಿ, ಪುರುಷಪ್ರಧಾನ ಪಾತಳಿಯಲ್ಲಿ ರೂಪುಗೊಂಡ ಈ ವ್ಯವಸ್ಥೆಯ ರಚನೆಗಳನ್ನು ಪ್ರಶ್ನಿಸಿ, ಧಿಕ್ಕರಿಸಿ ಸಮಾನತೆಯ ನೆಲೆಗಳನ್ನು ಮರುಸ್ಥಾಪಿಸುವ ಪ್ರಯತ್ನಿಸಿದರು. ವಚನಕಾರ್ತಿಯರ ಆಲೋಚನೆಗಳು, ಅಭಿವ್ಯಕ್ತಿಯ ಫಲವಾದ ಸ್ತ್ರೀ ಸಂವೇದನೆಯು ಮಹಿಳೆಗೆ ಒಂದು ವ್ಯಕ್ತಿತ್ವ, ಅಸ್ಥಿತ್ವ ಮತ್ತು ಮಹತ್ವವನ್ನು ರೂಪಿಸಿಕೊಡುವಲ್ಲಿ ಬಹುಮುಖ್ಯವಾದ ತಾತ್ವಿಕತೆಯಾಗಿ ಬೆಳೆದಿದೆ. ಈ ಪ್ರಕ್ರಿಯೆಯಲ್ಲಿ ಪುರುಷ ಮಹಿಳಾ ವಚನಕಾರರು ಎಂಬ ಬೇಧವಿಲ್ಲದೆ ಸ್ತ್ರೀ ಸಮಾನತೆಯ ಆಶಯವನ್ನು ರೂಪಿಸಿ, ಆ ಮೂಲಕ ಆ ಆಶಯಗಳನ್ನು ರಚನಾತ್ಮಕವಾಗಿಕಟ್ಟಲು ಯತ್ನಿಸಿದ್ದರೂ, ಶಿವಶರಣೆಯರು ತನ್ನದು ಮಾತ್ರವಾದ, ಅನುಭವಿಸಿದ್ದನ್ನು ತಾನು ಮಾತ್ರ ನುಡಿಬಲ್ಲ ಸ್ತ್ರೀತ್ವದ ಚಹರೆಯನ್ನು ಆಳವಾದ ತಾತ್ವಿಕ ಚೌಕಟ್ಟಿನೊಡನೆ ಕಟ್ಟಿಕೊಟ್ಟಿದ್ದಾರೆ.

**ಪರಾಮರ್ಶನ ಕೃತಿಗಳು.**

1. ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ, ಎಚ್.ಎಸ್. ಮುಕ್ತಾಯಕ್ಕ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1997
2. ಬೆಳಕಿಗಿಂತ ಬೆಳ್ಳಗೆ, ಎಂ.ಎಸ್. ಆಶಾದೇವಿ, ಕೇಂದ್ರ ಸಾಹಿತ್ಯ ಅಕಾಡೆಮಿ, ನವ ದೆಹಲಿ, 2016
3. ಸ್ತ್ರೀವಾದ, ಶ್ರೀಮತಿ ಎಚ್.ಎಸ್. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2003
4. ಶಿವಶರಣೆಯರ ವಚನ ಸಂಪುಟ– 5 ಸಂ. ಡಾ. ವೀರಣ್ಣ ರಾಜೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2001

**Citation:** ಡಾ. ಜಯಶಂಕರ ಎಂ.. 2025. "ಕನ್ನಡ ಶಿವಶರಣೆಯರ ವಚನಗಳಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ". International Journal of Academic Research, 12(3): 138-143.
**Copyright:** ©2025 ಡಾ. ಜಯಶಂಕರ ಎಂ.. This is an open-access article distributed under the terms of the Creative Commons Attribution License (https://creativecommons.org/licenses/by/4.0/), which permits unrestricted use, distribution, and reproduction in any medium, provided the original author and source are credited.